ಇ) ಕಟ್ಟಡ ಕಾರ್ಯ ಪ್ರಾರಂಭಿಸಲು ಅವಶ್ಯವಿರುವ ನಕ್ಷೆ ಅಂದಾಜುಗಳನ್ನು ತಯಾರಿಸಲಾಗಿದೆಯೇ?

ಈ) ಕಾಲೇಜಿನಲ್ಲಿ ಯಾವ ಯಾವ ವರ್ಗ ವಿಷಯಗಳಿಗೆ ಎಷ್ಟು ವಿದ್ಯಾರ್ಥಿಗಳಿದ್ದಾರೆ.

ಉ) ಎಷ್ಟು ವಿದ್ಯಾರ್ಥಿಗಳಿಗೆ ವಿಭಾಗಗಳನ್ನು ಮಾಡಲಾಗಿದೆ ಹಾಗೂ ವಿಶ್ವವಿದ್ಯಾಲಯ ಹಾಗೂ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಿಭಾಗಗಳನ್ನು ಮಾಡದೇ ಇರುವುದನ್ನು ಸರ್ಕಾರ ಗಮನಿಸಿದೆಯೇ?

ಊ) ಈ ಬಗ್ಗೆ ಸರ್ಕಾರ ಕೈಗೊಳ್ಳಲಾಗುವ ಕ್ರಮಗಳೇನು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು): ಅ) 14 ಎಕರೆ 38 ಗುಂಟೆ ಆಳತೆಯ ನಿವೇಶನವನ್ನು ಪಡೆದುಕೊಳ್ಳಲು ಉದ್ದೇಶಿಸಲಾಗಿದೆ. 1 ಎಕರೆಗೆ ರೂ. 18,000.00 ಗಳಂತೆ ಒಟ್ಟು ರೂ. 2,68,200.00 ಗಳನ್ನು ಮಂಜೂರು ಮಾಡಿದೆ.

ಆ) 1993-94ರಲ್ಲಿ ಭೂಸ್ವಾಧೀನಕ್ಕಾಗಿ ಕ್ರಮ ತೆಗೆದುಕೊಳ್ಳುತ್ತಿದ್ದ ಕಾರಣ ಹಣವನ್ನು ಒದಗಿಸಿಕೊಂಡಿರಲಿಲ್ಲ. 1994-95ನೇ ಸಾಲಿಗೆ ಹೊಸ ಕಾಮಗಾರಿಗಳ ಅಡಿಯಲ್ಲಿ ಪಟ್ಟಿಯ ಆಧಾರದ ಮೇಲೆ ಆಯವ್ಯಯ ಒದಗಿಸಲಾಗುವುದು.

ಇ) -ಇಲ್ಲ-

ಈ) ಅನುಬಂಧ-1ರಲ್ಲಿ ನೀಡಲಾಗಿದೆ.

ಉ) ವಿಭಾಗಗಳನ್ನು ಮಾಡಿರುವ ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಪ್ರಥಮ ಬಿ.ಎ. ಆಂಗ್ಲ ಭಾಷೆ ಹಾಗೂ ಕನ್ನಡ ಭಾಷೆಗಳಲ್ಲಿ ಮಾತ್ರ ಕಡಿಮೆ ವಿಭಾಗಗಳು ಇದ್ದು ಈ ವಿಷಯಗಳಲ್ಲಿ ಇನ್ನೂ ಎರಡೆರಡು ವಿಭಾಗಗಳನ್ನು ಹೆಚ್ಚಿಗೆ ಮಾಡುವಂತೆ ಸದರಿ ಕಾಲೇಜಿನ ಪ್ರಾಂಶುಪಾಲರಿಗೆ ಸೂಚನೆ ನೀಡಲಾಗಿದೆ.

ಊ) ಮೇಲೆ ನೀಡಿರುವ ಉತ್ತರದಂತೆ.

ಮೂಡಿಗೆರೆ ಕ್ಷೇತ್ರದಲ್ಲಿ ಹೈಸ್ಕೂಲು ಹಾಗೂ ಜೂನಿಯರ್ ಕಾಲೇಜುಗಳ ಸಂಖ್ಯೆ

239 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಹೈಸ್ಕೂಲು ಹಾಗೂ ಜೂನಿಯರ್ ಕಾಲೇಜುಗಳೆಷ್ಟು?

ಆ) ಈ ಎಲ್ಲಾ ಜ್ಯೂನಿಯರ್ ಕಾಲೇಜುಗಳಿಗೆ ಪ್ರಾಂಶುಪಾಲರುಗಳ ನೇಮಕ ಮಾಡಲಾಗಿದೆಯೇ?

ಇ) ಹಾಗೆಯೇ ಹೈಸ್ಕೂಲು ಹಾಗೂ ಜೂನಿಯರ್ ಕಾಲೇಜಿನ ಎಲ್ಲಾ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆಯೇ?

ಈ) ಉಳಿದಿರುವ ಬೋಧಕರ ಹುದ್ದೆಗಳೆಷ್ಟು ಹಾಗೂ ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ)

	ಹೈಸ್ಕೂಲ್	ಜೂನಿಯರ್	ಕಾಲೇಜು
1.	ಸರ್ಕಾರಿ	9	6
2.	ಅನುದಾನಿತ	4	-
	ಒಟ್ಟು	13	6

6 ಜ್ಯೂನಿಯರ್ ಕಾಲೇಜುಗಳ ಪೈಕಿ 2 ಕಾಲೇಜುಗಳಿಗೆ ಪ್ರಾಂಶುಪಾಲರುಗಳನ್ನು ಭರ್ತಿ ಮಾಡಲಾಗಿದ್ದು, 4 ಪ್ರಾಂಶುಪಾಲರುಗಳ ಹುದ್ದೆಗಳು ಖಾಲಿ ಇವೆ.

ಇ) -ಇಲ್ಲ-

ಪ್ರೌಢಶಾಲೆಗಳು	ಖಾಸಗಿ	ಸರ್ಕಾರಿ
ಮಂಜೂರಾದ ಹುದ್ದೆಗಳು	36	139
ತುಂಬಲಾದ ಹುದ್ದೆಗಳು	32	86
ಖಾಲಿಯಿರುವ ಹುದ್ದೆಗಳು	04	53

ಜೂನಿಯರ್ ಕಾಲೇಜುಗಳ ಉಪನ್ಯಾಸಕರು

ಮಂಜೂರಾದ ಹುದ್ದೆ	29
ತುಂಬಿದ ಹುದ್ದೆ	17
ಖಾಲಿಯಿರುವ ಹುದ್ದೆ	12

ಈ) ಖಾಲಿ ಇರುವ ಬೋಧಕರ ಹುದ್ದೆಗಳ ವಿವರ :

1.	ಸರ್ಕಾರಿ ಪ್ರೌಢಶಾಲಾ ಶಿಕ್ಷಕರು	53
2.	ಖಾಸಗಿ ಅನುದಾನಿತ ಪ್ರೌಢ ಶಾಲಾ ಶಿಕ್ಷಕರು	04
3.	ಸರ್ಕಾರಿ ಜೂನಿಯರ್ ಕಾಲೇಜು ಉಪನ್ಯಾಸಕರು	12
	ಒಟ್ಟು (ಅರವತ್ತೊಂಬತ್ತು)	69

1.ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 53 ಶಿಕ್ಷಕರ ಹುದ್ದೆಗಳನ್ನು ವಿಭಾಗ ಮಟ್ಟದ ನೇಮಕಾತಿ ಮುಖಾಂತರ ತುಂಬಲು ಕ್ರಮ ಕೈಕೊಳ್ಳಲಾಗುತ್ತಿದೆ.

2. ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ 4 ಶಿಕ್ಷಕರ ಹುದ್ದೆಗಳನ್ನು ಸರ್ಕಾರಿ ಆದೇಶದ ಸಂಖ್ಯೆ ಎಫ್ಪಿ 1 ಬಿಇಎಂ 93, ದಿನಾಂಕ 26-3-93ರ ಅನ್ವಯ ತುಂಬಲು ಅವಕಾಶ ಮಾಡಿದೆ.

3. ಸರ್ಕಾರಿ ಜ್ಯೂನಿಯರ್ ಕಾಲೇಜುಗಳಲ್ಲಿರುವ 12 ಉಪನ್ಯಾಸಕರ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೂಡಿಗೆರೆ ಪ್ರಥಮ ದರ್ಜೆ ಕಾಲೇಜಿನ ಬಗ್ಗೆ

238 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಮಂಜೂರಾತಿ ಯಾವಾಗ ದೊರೆಯಿತು?

ಆ) ಆ ಕಾಲೇಜಿಗೆ ಡಿ.ಎಸ್. ಬಿಳೀಗೌಡ ಕಾಲೇಜೆಂದು ಯಾವಾಗ ಹೆಸರಿಡಲಾಯಿತು?

ಇ) ಸ್ವಂತ ಕಟ್ಟಡ ಕಟ್ಟದೆ "ಡಿ.ಎಸ್. ಬಿಳೀಗೌಡ" ಪ್ರಥಮ ದರ್ಜೆ ಕಾಲೇಜು ಎಂದು ಹೇಗೆ ಸರ್ಕಾರ ಆದೇಶ ಹೊರಡಿಸಿತು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು) :

ಅ) ಸರ್ಕಾರದ ಆದೇಶ ಸಂಖ್ಯೆ: ಇಡಿ 24 ಎಂಯೂಸ್ 83 ದಿನಾಂಕ 26-6-83ರ ಮೇರೆಗೆ 1993-94ನೇ ಸಾಲಿನಲ್ಲಿ ಮೂಡಿಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ ದೊರೆಯಿತು.